**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಸಿ.ಸಿ. 706/2023</u>**

**<u>ಪಿಡಬ್ಲೂ-1</u>**

**<u>ಸಿಡಬ್ಲೂ-2</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಲೋಕೇಶ್ ಎಚ್ ಎಸ್ |
| ತಂದೆಯ ಹೆಸರು | - | ಸುಬ್ಬರಾಯಿ |
| ವಯಸ್ಸು | - | 42 ವರ್ಷ |
| ಕೆಲಸ | - | ಹಿರಿಯ ಆರೋಗ್ಯ ನಿರೀಕ್ಷಕರು |
| ವಾಸ | - | ಕೆ.ಆರ್.ನಗರ |

**<u>ದಿನಾಂಕ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ದಿಃ 11-07-2023 ರಂದು ನಮ್ಮ ಪುರಸಭೆ ಕಚೇರಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾಗ ಚಾಸಾ ಅಂದಿನ ಮುಖ್ಯಾಧಿಕಾರಿಯವರಾದ ಸುಧಾರಾಣಿಯವರು ನನಗೆ ಮತ್ತು ಚಾಸಾ-3 ರವರಿಗೆ ಚಾಸಾ-1 ರವರ ಜೊತೆಗೆ ದಾಳಿಗೆ ಹೋಗಲು ಸೂಚಿಸಿರುತ್ತಾರೆ. ಅದರಂತೆ ನಾವು ಪೊಲೀಸ್ ಠಾಣೆಗೆ ತೆರಳಿದ್ದು, ಚಾಸಾ-1 ರವರು ನಮಗೆ ಪಿ ಡಬ್ಲ್ಯೂ ಡಿ ಹಳೆಯ ಕ್ವಾರ್ಟಸ್ ಬಳಿ ಸಿದ್ದೀಕ್ ರವರ ಗುಜರಿಯ ಹತ್ತಿರ ಗಾಂಜಾವನ್ನು ಅಕ್ರಮವಾಗಿ ಉಪಯೋಗಿಸುತ್ತಿದ್ದ ದಾಳಿ ಮಾಡಲು ಸಹಕರಿಸುವಂತೆ ಕೋರಿರುತ್ತಾರೆ. ಅದರಂತೆ ನಾನು, ಚಾಸಾ-3 ರಿಂದ 6 ಚಾಸಾ-1 ರವರ ಜೊತೆ ಖಾಸಗಿ ವಾಹದಲ್ಲಿ ಸದರಿ ಸ್ಥಳಕ್ಕೆ ತೆರಳಿರುತ್ತೇವೆ.

ನಂತರ, ಸದರಿ ಸ್ಥಳದಲ್ಲಿ 4 ಜನ ಅಕ್ರಮವಾಗಿ ಗಾಂಜಾವನ್ನು ಇಟ್ಟುಕೊಂಡು ಸೇವನೆ ಮಾಡುತ್ತಿರುತ್ತಾರೆ. ನಾವು ಭೇಟಿ ನೀಡಿದ ಸಂದರ್ಭದಲ್ಲಿ ಬಹಳ ಹಳೆಯದಾದ ವಸತಿ ಗೃಹವಾಗಿದ್ದು, ಸದರಿ ವಸತಿ ಗೃಹಗಳಿಗೆ ಯಾವುದೇ ಬಾಗಿಲು ಮತ್ತು ಕಿಟಕಿಗಳು ಇರುವುದಿಲ್ಲ. ಸದರಿ ಸ್ಥಳದಲ್ಲಿ 4 ಜನ ಆಸಾಮಿಗಳಿದ್ದು, ಅವರುಗಳ ಹೆಸರನ್ನು ಕೇಳಲಾಗಿ ಸುಹೇಬ್, ಜಾಪರ್, ಮುಜಾಮಿಲ್ ಬೇಗ್ ಮತ್ತು ಶಮಿ ಎಂಬುದಾಗಿ ತಿಳಿದು ಬಂದಿರುತ್ತದೆ. ಅವರ ಪೈಕಿ ಒಬ್ಬ ಆಸಾವಿ

ು ಸುಹೇಬ್ ವೆಲ್ಡಿಂಗ್ ಕೆಲಸ, ಮುಜಾಮಿಲ್ ಬೇಗ್ ರವರು ಟೀ ಅಂಗಡಿಯನ್ನು ಇಟ್ಟುಕೊಂಡು ಜಾಪರ್ ಮತ್ತು ಶಮಿರವರು ಚಿಕನ್ ಅಂಗಡಿಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿರುವ ಕುರಿತು ತಿಳಿದು ಬಂದಿರುತ್ತದೆ.

ನಂತರ ನಮ್ಮ ಸಮಕ್ಷಮ ಪೊಲೀಸ್ ನವರು ಸದರಿ ಆಸಾಮಿಗಳನ್ನು ತಪಾಸಣೆ ಮಾಡಲಾಗಿ ಸುಹೇಬ್ ರವರ ಬಳಿ 4 ಪ್ಯಾಕೇಟ್ ಗಾಂಜಾವನ್ನು ತೂಕ ಮಾಡಲಾಗಿ 64 ಗ್ರಾಂ ಇತ್ತು. ಮುಜಾಮಿಲ್ ಬೇಗ್ ರವರ ಬಳಿ ಹಿಂದಿನ ಜೇಬ್ ನಲ್ಲಿ 3 ಗಾಂಜಾ ಪ್ಯಾಕೆಟ್ ಗಳು ಇದ್ದು ಸದರಿ ಗಾಂಜಾವನ್ನು ತೂಕ ಮಾಡಲಾಗಿ 35 ಗ್ರಾಂ 75 ಮಿಲಿ ಇತ್ತು. ಜಾಪರ್ ರವರ ಬಳಿ ಸಹ 4 ಗಾಂಜಾ ಪ್ಯಾಕೆಟ್ ಗಳು ಇದ್ದು ಸದರಿ ಗಾಂಜಾವನ್ನು ತೂಕ ಮಾಡಲಾಗಿ 75 ಗ್ರಾಂ 35 ಮಿಲಿ ಇತ್ತು. ಶಮಿರವರ ಬಳಿ ಹಿಂದಿನ ಜೇಬ್ ನಲ್ಲಿ 5 ಗಾಂಜಾ ಪ್ಯಾಕೆಟ್ ಗಳು ಇದ್ದು ಸದರಿ ಗಾಂಜಾವನ್ನು ತೂಕ ಮಾಡಲಾಗಿ 80 ಗ್ರಾಂ 30 ಮಿಲಿ ಇತ್ತು.

ನಂತರ, ಎಲ್ಲಾ ಗಾಂಜಾವನ್ನು ವಶಪಡಿಸಿಕೊಂಡು ಚಾಸಾ-7 ರವರ ಕಚೇರಿಗೆ ಬಂದು ಅಲ್ಲೇ ಇದ್ದ ಲ್ಯಾಪಟಾಪ್ ಸಹಾಯದಿಂದ ಟೈಪ್ ಮಾಡಿ ಸಂಜೆ 5.00 ರಿಂದ 6.00 ಗಂಟೆಯವರೆಗೆ ಪಂಚನಾಮೆಯ ಮುಖೇನ ಅದನ್ನು ವಶಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು **ನಿಪಿ-1** ಎಂದು ಹಾಗೂ ಅದೇ ರೀತೀ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ